# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 128/2019

**ಫಿರ್ಯಾದುದಾರರುಃ** **ಕರ್ನಾಟಕ ರಾಜ್ಯದ ಪರವಾಗಿ (ಚಿಂತಾಮಣಿ ನಗರ ಪೋಲಿಸರು)**

**ವಿರುದ್ಧ**

**ಆರೋಪಿತರುಃ** **ಲೋಕೇಶ್ ಮತ್ತು ಇತರರು**

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ಅಮರನಾಥರೆಡ್ಡಿ | ಫ್ರಾಸಾಃ | 09 |
| **ತಂದೆಯ ಹೆಸರುಃ** | ಶ್ರೀರಾಮರೆಡ್ಡಿ | ಚಾಸಾಃ | 14 |
| **ವಯಸ್ಸುಃ** | 34 ವರ್ಷ | ಪ್ರಮಾಣ ವಚನ ಭೋದಿಸಿದ ದಿನಾಂಕ | 04.05.2024 |
| **ಉದ್ಯೋಗಃ** | ವ್ಯವಸಾಯ | | |
| **ವಾಸ ಸ್ಥಳಃ** | ಚೊಕ್ಕಹಳ್ಳಿ ಗ್ರಾಮ, ಚಿಂತಾಮಣಿ ತಾಲ್ಲೂಕು | | |

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಮೃತ ಸರಸ್ವತಮ್ಮ ನನಗೆ ಗೊತ್ತು, ಆಕೆ ನಮ್ಮ ಊರಿನವರು. ನ್ಯಾಯಾಲಯದ ಮುಂದೆ ಇರುವ 2 ಮತ್ತು 4 ನೇ ಆರೋಪಿತರು ಮತ್ತು 3 ನೇ ಆರೋಪಿ ನನಗೆ ಗೊತ್ತಿಲ್ಲ. (3 ನೇ ಆರೋಪಿ ಈ ದಿನ ಗೈರು ಹಾಜರಿದ್ದು, ಆಕೆಯ ಪರ ವಕೀಲರು ಆಕೆಯ ಗುರುತನ್ನು ವಿವಾದಿಸುವುದಿಲ್ಲ ಎಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ.) ಚಾ.ಸಾ.16 ಮತ್ತು ಚಾ.ಸಾ.17 ರವರು ನನಗೆ ಗೊತ್ತು, ಅವರು ಮೃತ ಸರಸ್ವತಮ್ಮಳ ಮಕ್ಕಳು.

2) 5 ವರ್ಷದ ಹಿಂದೆ ಮೃತ ಸರಸ್ವತಮ್ಮ ಆಸ್ಪತ್ರೆಯಲ್ಲಿ ನಿಧನ ಹೊಂದಿರುತ್ತಾಳೆ. ಮೃತ ಸರಸ್ವತಮ್ಮ ಗಂಗಮ್ಮ ದೇವಸ್ಥಾನದಲ್ಲಿ ಕೊಟ್ಟ ವಿಷದ ಪ್ರಸಾದವನ್ನು ಸ್ವೀಕರಿಸಿ ಮೃತಪಟ್ಟಿರುತ್ತಾಳೆ. ನಾನು ಶವವನ್ನು ಆರ್.ಎಲ್.ಜಾಲಪ್ಪ ಆಸ್ಪತ್ರೆಯಲ್ಲಿ ನೋಡಿರುತ್ತೇನೆ. ಈಗ ತೋರಿಸಿದ ದಾಖಲೆಯಲ್ಲಿ ಸಾಕ್ಷಿಯು ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ದಾಖಲೆಯು ನೋಟಿಸು ಮತ್ತು ಶವ ಪಂಚನಾಮೆ ಆಗಿದ್ದು, ಅವು ಈಗಾಗಲೇ ನಿ.ಪಿ.6 ಮತ್ತು ನಿ.ಪಿ.7 ಎಂದು ಗುರುತಿಸಲ್ಪಟ್ಟಿದ್ದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿ.ಪಿ.6(ಬಿ) ಮತ್ತು ನಿ.ಪಿ.7(ಬಿ) ಎಂದು ಗುರುತಿಸಲಾಯಿತು. ಪೋಲಿಸರು ನನ್ನ ಸಮಕ್ಷಮ ಶವ ಪಂಚನಾಮೆಯನ್ನು ಬರೆದಿರುತ್ತಾರೆ. ನಾನು ಶವವನ್ನು ಗುರುತಿಸಿರುತ್ತೇನೆ. ನಾನು ನಿ.ಪಿ.7 ರ ದಾಖಲೆಗೆ ಸಹಿ ಮಾಡುವ ಸಮಯ ಮಧ್ಯಾಹ್ನ 12.00 ಗಂಟೆ ಆಗಿತ್ತು.

**<u>ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ.ಸಿ.ಕೆ. ವಕೀಲರಿಂದಃ</u>**

3) ಆರ್.ಎಲ್.ಜಾಲಪ್ಪ ಆಸ್ಪತ್ರೆಯಲ್ಲಿ ಪೋಲಿಸರು ಮೃತ ಸರಸ್ವತಮ್ಮಳ ಶವವನ್ನು ನೋಡಿಸಿ ನನ್ನ ವಿಚಾರಣೆ ಮಾಡಿ, ಶವ ಪರೀಕ್ಷೆ ಮಾಡಿ ನನ್ನ ಅಭಿಪ್ರಾಯವನ್ನು ಪಡೆದಿರುತ್ತಾರೆಂದರೆ ಸರಿ. ಆ ದಿನ ಪೋಲಿಸರು ವಿಚಾರಣೆ ಮಾಡುವ ಸಮಯದಲ್ಲಿ ಯಾರೋ ಒಬ್ಬ ಹೆಂಗಸು ರವೆಯಲ್ಲಿ ತಯಾರಿಸಿದ ಪ್ರಸಾದವನ್ನು ಭಕ್ತಾದಿಗಳಿಗೆ ಪೇಪರ್ ಕಪ್ಪುಗಳಲ್ಲಿ ಹಂಚುತ್ತಿದ್ದು, ಮೃತಳು ಮತ್ತು ಆಕೆಯ ಮಗಳಾದ ಶ್ರೀಗೌರಿ ಪ್ರಸಾದವನ್ನು

ತೆಗೆದುಕೊಂಡು ಮನೆಗೆ ಬಂದಿದ್ದು, ಶ್ರೀಗೌರಿ ತನಗೆ ಪ್ರಸಾದ ತಿನ್ನುವುದು ಇಷ್ಟವಿಲ್ಲ ಎಂದು ಹೇಳಿದ್ದರಿಂದ ಮೃತಳು ತನಗೆ ನೀಡಿದ್ದ ಒಂದು ಕಪ್ ನಲ್ಲಿದ್ದ ಪ್ರಸಾದವನ್ನು ತಿಂದು, ನಂತರ ಮಗಳಿಗೆ ನೀಡಿದ ಕಪ್ ಪ್ರಸಾದ್ ದಲ್ಲಿ ಅರ್ಧದಷ್ಟು ಸರಸ್ವತಮ್ಮಳು ತಿಂದಿದ್ದು, ತಿಂದ ಅರ್ಧ ಗಂಟೆಯಲ್ಲಿ ಮೃತಳಿಗೆ ವಾಂತಿಭೇದಿ ಶುರುವಾಗಿದ್ದು ಸರಿ ಹೋಗಬಹುದು ಎಂದು ಮನೆಯಲ್ಲಿಯೇ ಇದ್ದು, ಮಾರನೇ ದಿನ ದಿನಾಂಕಃ26.01.2019 ರಂದು ........................................................ ಮೃತಪಟ್ಟಿದ್ದಾಳೆ ಎಂದು ನನ್ನ ಅಭಿಪ್ರಾಯವನ್ನು ನೀಡಿರುತ್ತೇನೆಂದರೆ ಸರಿ.

**ಪಾಟೀ ಸವಾಲುಃ 3 ಮತ್ತು 4 ನೇ ಆರೋಪಿತರ ಪರ ವಕೀಲರು ಮೇಲೆ 2 ನೇ ಆರೋಪಿ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು, ಅಳವಡಿಸಿಕೊಳ್ಳಲಾಯಿತು.**

**ಮರು ವಿಚಾರಣೆಃ ..... ಇಲ್ಲ .....**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ದಿಃ04.05.2024 **(ನಾಗವೇಣಿ)**
ಸ್ಥಳಃ ಚಿಂತಾಮಣಿ ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.